ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1732/2018

ಚಾಸಾ:1 ಪ್ರಾಸಾ:1

ದಿನಾಂಕ: 22.04.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಸುರೇಶ್ ಪೂಜಾರಿ |
| ತಂದೆಯ ಹೆಸರು | : | ಆನಂದ ಪೂಜಾರಿ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ಹುಣ್ಸೆಮಕ್ಕಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಆರೋಪಿಯ ಪರಿಚಯವಿಲ್ಲ. ಮೃತ ಸಂಕು ಪೂಜಾರಿ ನಮ್ಮ ಪಕ್ಕದ ಮನೆಯವರು. 2018ರಲ್ಲಿ ನಾನು ಮನೆಯಲ್ಲಿ ಇದ್ದಾಗ ಸುಮಾರು 200 ಮೀಟರ್ ದೂರದಲ್ಲಿ ಆಕೆಗೆ ಅಪಘಾತವಾಗಿದ್ದು, ನನ್ನ ತಾಯಿ ಸದ್ರಿ ವಿಚಾರವನ್ನು ನನಗೆ ತಿಳಿಸಿದ ನಂತರ ನಾನು ಹೋಗಿ ನೋಡಲಾಗಿ ಅಪಘಾತವಾಗಿದ್ದು, ಒಂದು ಕಾರಿನಿಂದ ಅಪಘಾತವಾಗಿದ್ದು, ಆಕೆಯ ತಲೆಗೆ ತೀವ್ರ ಸ್ವರೂಪದ ಗಾಯವಾಗಿತ್ತು. ಅನಂತರ ಸ್ಥಳೀಯರು ಆಸ್ಪತ್ರೆಗೆ ಆಕೆಯನ್ನು ದಾಖಲಿಸಿರುತ್ತಾರೆ. ಅನಂತರ ಆಕೆ ಮೃತಪಟ್ಟಿರುವ ಬಗ್ಗೆ ನನಗೆ ತಿಳಿದು ಬಂದಿರುತ್ತದೆ. ಆ ವಿಚಾರವಾಗಿ ನಾನು ಠಾಣೆಗೆ ಹಾಜರಾಗಿ ದೂರು ನೀಡಿರುತ್ತೇನೆ. ಆ ವೇಳೆಗೆ ಪೊಲೀಸರು ಕೆಲವು ದಾಖಲೆಗಳಿಗೆ ಸಹಿ ಪಡೆದಿರುತ್ತಾರೆ.

ಸಾಕ್ಷಿ ದೂರು, ಸ್ಥಳ ಪಂಚನಾಮೆ, ಸ್ವತ್ತು ಸ್ವಾಧೀನತಾ ಪಂಚನಾಮೆಗಳಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದ್ರಿ ದಾಖಲೆಗಳನ್ನು ನಿಪಿ-1 ರಿಂದ 3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 3(ಎ) ಎಂದು ಗುರುತಿಸಲಾಯಿತು. 2 ಪೋಟೋಗಳಲ್ಲಿ ತನ್ನನ್ನು ನೋಡಿ ಗುರುತಿಸಿದ್ದು ಮೊದಲನೆಯದ್ದು ಘಟನಾ ಸ್ಥಳದಲ್ಲಿ ಹಾಗೂ 2ನೇ ಪೋಟೊವನ್ನು ಠಾಣೆಯಲ್ಲಿ ತೆಗೆದಿರುವುದಾಗಿ ನುಡಿದಿರುತ್ತಾರೆ. ಸದ್ರಿ ಪೋಟೋಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 02-02-2018 ರಂದು ಅಪಘಾತವಾಗಿರುವುದು ಎಂದರೆ ಇರಬಹುದು. ಸದ್ರಿ ದಿನ 4 ಗಂಟೆಗೆ ಸಂಕು ಪೂಜಾರ್ತಿರವರು ಹುಣ್ಸೆಮಕ್ಕಿ ಮಾರ್ಕೆಟ್ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಎದುರಿನಿಂದ ಬರುತ್ತಿದ್ದ ಆರೋಪಿ ತನ್ನ ಬಾಬ್ತು ಕೆಎ-20-ಜಡ್-0762 ವಾಹನವನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ತೀರ ಬಲಕ್ಕೆ ಚಲಾಯಿಸಿಕೊಂಡು ಬಂದು ಎದುರಿನಿಂದ ಡಿಕ್ಕಿ ಹೊಡೆದ ಪರಿಣಾಮ ಆಕೆಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು ಸಂಜೆ 7-55ಕ್ಕೆ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅಪಘಾತವಾಗಿದ್ದು, ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ ಒಕ್ಕಣೆಯನ್ನು ನಾನೇ ಠಾಣೆಯಲ್ಲಿ ಬರೆದಿರುತ್ತೇನೆ. ನಾನು ಅಪಘಾತದ ಪ್ರತ್ಯಕ್ಷದರ್ಶಿ ಎಂದರೆ ಸರಿಯಲ್ಲ. ನಾನು ಮತ್ತು ಸ್ಥಳೀಯರು ಆಕೆಯನ್ನು ಉಪಚರಿಸಿ ಆಕೆಯನ್ನು ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದರೆ ಸರಿ. ಸದ್ರಿ ಕಾರಿನ ಚಾಲಕ ನ್ಯಾಯಾಲಯದ ಮುಂದೆ ಇರುವ ಆರೋಪಿಯಾಗಿದ್ದರು ಎಂದರೆ ನನಗೆ ತಿಳಿದಿಲ್ಲ. ಸ್ಥಳದಲ್ಲಿ ಕೆಎ-20-ಜಡ್-0762 ವಾಹನವನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 03-02-2018 ರಂದು ಪೋಲಿಸರು ಘಟನಾ ಸ್ಥಳಕ್ಕೆ ಭೇಟಿ ನೀಡಿದಾಗ ನಾನು ತೋರಿಸಿದ ಸ್ಥಳದಲ್ಲಿ ಚಾಸಾ-8 ಮತ್ತು 9 ರವರ ಸಮಕ್ಷಮ ಬೆಳಿಗ್ಗೆ 11-00 ರಿಂದ 11-45ರವರೆಗೆ ಪಂಚನಾಮೆ ಜರುಗಿಸಿ ನಕ್ಷೆ ತಯಾರಿಸಿ ನಿಪಿ-4 ಪೋಟೋ ತೆಗೆದಿರುತ್ತಾರೆ ಎಂದರೆ ನೆನಪಿಲ್ಲ.

ಅದೇ ದಿನ ಮೇಲೆ ಹೇಳಿದ ಕಾರನ್ನು ಆರೋಪಿಯಿಂದ ವಶಕ್ಕೆ ಪಡೆದು ಪಂಚನಾಮೆಯನ್ನು ಮಧ್ಯಾಹ್ನ 2 ರಿಂದ 2-30ರವರೆಗೆ ಜರುಗಿಸಿ ನಿಪಿ-3 ಕ್ಕೆ ನನ್ನ ಸಹಿ ಪಡೆದು ನಿಪಿ-5 ರ ಪೋಟೋ ತೆಗೆದಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಅದೇ ದಿನ ಪೊಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

ಸದ್ರಿ ಅಪಘಾತವನ್ನು ನಾನು ನೋಡಿದ್ದು ಪಿರ್ಯಾದುದಾರನಾಗಿ ಆರೋಪಿಯ ಅತೀ ವೇಗ ನಿರ್ಲಕ್ಷ್ಯತನದ ಚಾಲನೆಯಿಂದ ಅಪಘಾತ ಸಂಭವಿಸಿ ಸಂಕು ಪೂಜಾರ್ತಿರವರು ಮೃತಪಡಲು ಕಾರಣವಾಗಿದ್ದರೂ ನನಗೆ ಪ್ರಕರಣದ ಮಾಹಿತಿಯಂತೆ ಪೊಲೀಸರಿಗೆ ಎಲ್ಲಾ ಕ್ರಮಗಳಲ್ಲಿ ಸಹಕರಿಸಿದ್ದರೂ ಸಹ ಆರೋಪಿ ಪರಿಚಯಸ್ಥರಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಕೆ ಸಿ ಎಸ್ ರವರಿಂದಃ</u>**

ಅಪಘಾತದ ಬಗ್ಗೆ ನನ್ನ ತಾಯಿ ಹೇಳಿದ ಮೇರೆಗೆ ತಿಳಿದು ಬಂದಿರುತ್ತದೆ. ನಾನು ಪ್ರತ್ಯಕ್ಷದರ್ಶಿ ಅಲ್ಲ. ಪೊಲೀಸರ ಮಾಹಿತಿ ಮೇರೆಗೆ ನಿಪಿ-1 ರ ಒಕ್ಕಣೆಯನ್ನು ಬರೆದಿರುತ್ತೇನೆ ಎಂದರೆ ಸರಿ. ಮೇಲೆ ಗುರುತಿಸಿದ ಎಲ್ಲಾ ದಾಖಲೆಗಳಿಗೆ ಸಹಿಗಳನ್ನು ಠಾಣೆಯಲ್ಲಿ ಮಾಡಿರುತ್ತೇನೆ. ಅವುಗಳಲ್ಲಿ ಏನು ಬರೆದಿದೆ ಎಂದು ನಾನು ಓದಿರುವುದಿಲ್ಲ. ಪೊಲೀಸರ ಕೋರಿಕೆ ಮೇರೆಗೆ ಪೋಟೊಗಳಲ್ಲಿ ನಿಂತಿದ್ದು ಅವುಗಳನ್ನು ಎಲ್ಲಿ ತೆಗೆಯಲಾಯಿತು ಎಂದು ನನಗೆ ಹೇಳಲಾಗುವುದಿಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**